# ಪುಳಿಮೂಟೆ ರಾಜ



ಕರೆಸುವುದಾದರೆ ಅವನ್ನ ಕರೆಸಿ
ಪುಳಿಮೂಟೆ ರಾಜನ ದಯವಿಟ್ಟು ಕರೆಸಿ
ಅವನಿಲ್ಲದಿನ್ನು ಹೇಳೋರು ಯಾರು—
ತಲೆಬಾಲಿಲ್ಲದ ಕತೆಗಳ ನೂರು

ಪುಳಿಮೂಟೆ ಕೈಕಟ್ಟಿ ಕುಳಿತರೆ ಸಾಕು
ಕತೆಗಳು ಬರುತ್ತವೆ ಪುತ ಪುತ ಎಂದು

ಪುಳಿಮೂಟೆ ಸುಮ್ಮನೆ ಇದ್ದರು ಸಾಕು
ಎದ್ದೇಳುತ್ತವೆ ಎಷ್ಟೋ ಜೋಕು

ಕಣ್ಣಾರೆ ಕಾಣಿ ಕಿವಿಯಾರೆ ಕೇಳಿ
ಗೊತ್ತಾಗದಿದ್ದರೆ ನಮ್ಮತ್ರ ಹೇಳಿ

ಕೆಲವನು ದಿಂಬಿನ ಕೆಳಗಿಟ್ಟುಕೊಳ್ತಾನೆ
ಕೆಲವನು ಮೈಮೇಲೆ
ಹೊದ್ದುಕೊಂಡಿರುತಾನೆ

ಕಿಟಕಿಯಲೊಂದತ್ತು
ಕೂತುಕೊಂಡಿರುತ್ತಾವೆ
ಬಾಗಿಲ ಬಳಿ ಇಪ್ಪತ್ತು
ಕಾದುಕೊಂಡಿರುತ್ತಾವೆ

ಪುಳಿಮೂಟೆ ಹೋದಲ್ಲಿ ತಾವೂ ಹೋಗ್ತವೆ
ಅಂಥಾ ಅನುನಯ ಬೇರೆಲ್ಲಿ ಸಿಗುತವೆ?

ಈಚೀಚೆಗವನಿಗೆ ಸಾಕಾಗಿಹೋಗಿದೆ
ಇದೆಲ್ಲ ಯಾಕೋ ಅತಿಯಾಯ್ತು ಎನಿಸಿದೆ

ಬಕೆಟಿನಲೊಂದೊಂದನು ಮುಳುಗಿಸಿ
ನೋಡಿದ
ಕೆಲವೊಂದ ತೆಗೆದು ದೂರ ಬಿಸಾಕಿದ

ತಾಳೆಯ ಕೊಬೆಯೇರಿ ಕೆಳಕ್ಕೆ ಹಾಕಿದ
ಸೌದೆಯ ಬದಲಿಗೆ ಕತೆಗಳ ದೂಕಿದ

ಎಲ್ಲಾ ಮುಗಿದುವು ಎಂದ್ಕೊಂಡು
ಮಲಗಿದ
ಮುಂಜಾನೆದ್ದು ಹೌಹಾರಿ ಬಿದ್ದ!

ಒಂದೂ ಬಿಡದಂತೆ ವಾಪಸು ಬಂದಿದ್ವು
ಅಂಗಾಂಗ ಮಾತ್ರವೆ ತುಸು ಬದಲಿದ್ವು

ಒಂದರ ಕಣ್ಣು ಒಂದಕೆ ಜೋಡಿಸಿ
ಒಂದರ ಕಿವಿ ಮತ್ತೊಂದಕ್ಕೆ ಕೂಡಿಸಿ!

ಪುಳಿಮೂಟೆ ರಾಜನೂ
ಕಥಾರ್ಣವದಲ್ಲೆಲ್ಲೊ
ಕಳಕೊಂಡಿರುವನು ಕಾಣಿಸನಲ್ಲೊ

ಕತೆಗಳು ಒಂದಾಗಿ ನುಂಗಿದುವವನ
ದಿನ ದಿನ ತಮ್ಮನು ದಂಡಿಸಿದವನ

ಕರೆಸುವುದಾದರೆ ಅವನ್ನ ಕರೆಸಿ
ನೋಡುವ ನಾವೂ ಏನವನ ವರಸಿ